ಡೀಸೆಲ್‌ಗೆ ಸೀಮೆಎಣ್ಣೆ ಬೆರಸುವವರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ವಾಹನಗಳು ಹಾಳಾಗುತ್ತಿರುವುದಲ್ಲದೆ, ಪರಿಸರ ಸಹ ಮಾಲೀನ್ಯವಾಗುತ್ತಿದೆ. ಇದರ ಬಗ್ಗೆ ಸಾಕಷ್ಟು ದೂರುಗಳು ಬಂದಿದ್ದರೂ ಗೊತ್ತಿಲ್ಲ ಎಂದು ತಾವು ಹೇಳಿದ್ದೀರಿ. ಇವತ್ತು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ ಇದಕ್ಕೆ ಸಂಬಂಧಪಟ್ಟ ಇಲಾಖೆ ಇದ್ದರೂ ಕೂಡಾ, ಪ್ರತಿಯೊಂದು ಅರ್ಜಿ ಕೊಟ್ಟ ಮೇಲೆ ಅವರು ಹೋಗಿ ನೋಡುವುದಲ್ಲ. ಎಲ್ಲೆಲ್ಲಿ ಅನುಮಾನ ಬರುತ್ತದೆ ಅಲ್ಲಿಗೆ ಅವರೇ ಹೋಗಿ ಚೆಕ್ ಮಾಡುವ ಕಾರ್ಯಕ್ರಮ ಹಾಕಿಕೊಂಡು ಕೇಸ್‌ಗಳನ್ನು ಹಾಕಿದ್ದೇ ಆದರೆ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲವನ್ನು ತಪ್ಪಿಸಬಹುದು ಎಂದು, ಈ ಸಭೆಯ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಪೆಟ್ರೋಲ್ ಮತ್ತು ಡೀಸೆಲ್‌ಗೆ ಸೀಮೆಎಣ್ಣೆ ಕಲಬೆರಕೆ ಆಗುತ್ತಿದೆ ಎಂದು ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಗೆ ಉತ್ತರ ಹೇಳಬೇಕೆಂದರೆ, ಈ ಬಿ.ಪಿ.ಎಲ್. ಮತ್ತು ಹೆಚ್.ಪಿ.ಸಿ. ಕಂಪೆನಿಯವರು ನಾವು ಪೋಲೀಸ್ ಇಲಾಖೆಯ ಮೂಲಕ ಮಾಡುವ ತಪಾಸಣೆಗೆ ಒಪ್ಪುತ್ತಿಲ್ಲ. ಈಗ ಕೇಂದ್ರದ ಅಧಿಕಾರಿಗಳ ಜೊತೆ ಇದರ ಬಗ್ಗೆ ಚರ್ಚಿಸಿದ್ದೇವೆ. ಈ ಕಂಪನಿಗಳಿಗೆ ಕಳುಹಿಸಿದ ಒಂದೊಂದು ಸ್ಯಾಂಪಲ್‌ಗೆ ಅವರು ೫೦೦ ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಇದನ್ನು ರಾಜ್ಯ ಸರಕಾರದಿಂದ ನಿಭಾಯಿಸುವುದಕ್ಕೆ ಕಷ್ಟವಾಗುತ್ತಿದೆ. ಪೋಲೀಸ್ ಇಲಾಖೆಯ ಮೂಲಕ ಮಾಡಿಸತಕ್ಕ ತಪಾಸಣೆಗೆ ಅವರು ಒಪ್ಪುತ್ತಿಲ್ಲ. ಇದನ್ನು ಅವರು ಒಪ್ಪಬೇಕೆಂದು ಚರ್ಚೆ ಇರುತ್ತದೆ. ಪೆಟ್ರೋಲ್ ಡೀಸೆಲ್ ಬಗ್ಗೆ ನಾವು ಈಗಾಗಲೇ ಇದನ್ನು ಮಾಡುತ್ತಿದ್ದೇವೆ.

ಇನ್ನು ಆಹಾರ ಪದರ್ಥಾಗಳ ವಿತರಣೆ ಬಗ್ಗೆ ಏನಾದರೂ ದೂರುಗಳು ಇದ್ದರೆ ಮಾನ್ಯ ಸದಸ್ಯರು ಹೇಳಿದರೆ ಆ ಬಗ್ಗೆ ಇಲಾಖೆಯನ್ನು ಚುರುಕುಗೊಳಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಮಂಧ್ಯ ಎದ್ದು ನಿಂತು ಮಾತನಾಡಿದರೆ ಹೇಗೆ ?

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಇಲ್ಲ, ಕುಳಿತುಕೊಳ್ಳಿ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಒಂದು ಕ್ಲಾರಿಫಿಕೇಶನ್ ಅಧ್ಯಕ್ಷರೆ...

ಅಧ್ಯಕ್ಷರು.—ಇಲ್ಲ ಕುಳಿತುಕೊಳ್ಳಿ,

ಶ್ರೀ ಐ. ಬಿ. ಶಂಕರ್.—ಇವತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಬೆಳೆಯುತ್ತಾರೆ, ಕಾಫಿಗೆ ಚಿಕೋರಿ ಇಂತಿಷ್ಟು ಪ್ರಮಾಣದಲ್ಲಿ ಹಾಕಬೇಕೆನ್ನುವ ನಿಯಮ ಇದೆ. ಈಗ ಚಿಕೋರಿಗೆ ಮಾನ್ಯ ಮುಖ್ಯ ಮಂತ್ರಿಗಳು ರಿಯಾಯಿತಿಯನ್ನು ಕೊಟ್ಟಿರುವುದರಿಂದ ಚಿಕೋರಿಯನ್ನು ಹೆಚ್ಚು ಹಾಕಿ ವ್ಯಾಪಾರ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಪ್ರಶ್ನೆ ಸಂಖ್ಯೆ : ೬೪೩(೧೯೫೪)

(ಮಾನ್ಯ ಸದಸ್ಯರ ಪ್ರಶ್ನೆಯನ್ನು ಮಂಡಿಸಲಾಗಿದೆ)

ಗ್ರಾಮಾಂತರ ಪ್ರದೇಶದಲ್ಲಿ ಆಹಾರ ಧಾನ್ಯಗಳ ವಿತರಣೆ.

೬೪೩. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) —ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಡಿತರ ಚೀಟಿಗಳ ಮೂಲಕ ಆಹಾರ ಧಾನ್ಯಗಳ ವಿತರಣೆಯಲ್ಲಿ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ತಾರತಮ್ಯ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಅ) ಇದರಿಂದ ಗ್ರಾಮಾಂತರ ಪ್ರದೇಶಗಳ ಜನತೆಗೆ ಅನ್ಯಾಯವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದನ್ನು ತಪ್ಪಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ(ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಗ್ರಾಮಾಂತರ ಪ್ರದೇಶದಲ್ಲಿ ವಿತರಿಸುವ ಆಹಾರ ಧಾನ್ಯಗಳ ಪ್ರಮಾಣ ಕಮ್ಮಿ ಇದ್ದರೂ ಹೆಚ್ಚಿನ ಸಬ್ಸಿಡಿಯುಕ್ತವಾಗಿರುವುದರಿಂದ ಅನ್ಯಾಯವಾಗುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಈ ತರಹ ಉತ್ತರ ಕೊಟ್ಟರೆ ನಾವು ಪ್ರಶ್ನೆ ಕೇಳುವ ಅಗತ್ಯವೇ ಇರುವುದಿಲ್ಲ. ಗ್ರಾಮಾಂತರ ಪ್ರದೇಶಗಳ ಮತ್ತು ಪಟ್ಟಣ ಪ್ರದೇಶಗಳ ಆಹಾರ ವಿತರಣೆಯಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಮತ್ತು ಸರ್ಕಾರದ ಗಮನಕ್ಕೆ ಬಂದಿದೆ ಎಂದೂ ಸಹ ಹೇಳಿದ್ದಾರೆ. ಪಟ್ಟಣ ಪ್ರದೇಶಗಳಲ್ಲಿ ಒಂದು ಕಾರ್ಡಿಗೆ ೨೦ ಕೆ.ಜಿ. ಅಕ್ಕಿಯನ್ನು ಕೊಡುತ್ತಾರೆ. ಮತ್ತೆ ಸಕ್ಕರೆ ೫ ಕೆ.ಜಿ. ಕೊಡುತ್ತಾರೆ. ಎರಡು ಕೆ.ಜಿ. ಎಣ್ಣೆ ಕೊಡುತ್ತಾರೆ. ಗೋಧಿ ೧೦ ಕೆ.ಜಿ. ಕೊಡುತ್ತಾರೆ. ಅದೇ ಗ್ರಾಮಾಂತರ ಪ್ರದೇಶದಲ್ಲಿ ನಿರತಕ್ಕಂಥ ಗ್ರೀನ್ ಕಾರ್ಡ್‌ಗೆ ೩ ಕೆ ಜಿ. ಅಕ್ಕಿ ಕೊಡುತ್ತಾರೆ, ಎರಡು ಕೆ. ಜಿ. ಸಕ್ಕರೆ ಕೊಡುತ್ತಾರೆ, ಒಂದು ಕೆ. ಜಿ ಎಣ್ಣೆ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೊಟ್ಟಿರತಕ್ಕಂಥ ಹಸಿರು ಕಾರ್ಡಿಗೆ ಸಬ್‌ಸಿಡಿ ರೇಟ್‌ನಲ್ಲಿ ಆಹಾರ ಧಾನ್ಯಗಳನ್ನು ಕೊಟ್ಟರೆ ಅವರಿಗೆ ನಿರತಕ್ಕಂಥ ಆಹಾರದ ಸಮಸ್ಯೆ ಎಲ್ಲಾ ಬಗೆಹರಿಸಿದಂತೆ ಆಗುತ್ತದೆಯೇ ? ಗ್ರಾಮಾಂತರ ಪ್ರದೇಶಗಳಲ್ಲಿ ಕೂಲಿಕಾರರು ಇದ್ದಾರೆ. ಕೃಷಿ ಕಾರ್ಮಿಕರು ಇದ್ದಾರೆ, ಪಟ್ಟಣ ಪ್ರದೇಶಗಳಿಗೆ ಒಳ್ಳೆಯ ಅಕ್ಕಿಯನ್ನು ಸರಬರಾಜು ಮಾಡುತ್ತೀರಿ, ಆದೇ ಗ್ರಾಮಾಂತರ ಪ್ರದೇಶಗಳಿಗೆ ಕೊಡತಕ್ಕಂಥ ಅಕ್ಕಿಯನ್ನು ಉಪಯೋಗಿಸುವುದಕ್ಕೆ ಆಗದಿರುವಂತಹ ಅಕ್ಕಿಯನ್ನು ಕೊಡುತ್ತೀರಿ. ಮತ್ತು ಹಂಚಿಕೆಯ ವ್ಯವಸ್ಥೆಯಲ್ಲಿಯೂ ಸಹ ವ್ಯತ್ಯಾಸವಾಗಿದೆ. ಈ ರೀತಿ ಇದ್ದರೂ ಸಹ ಇದನ್ನು ಸುಧಾರಣೆ ಮಾಡುವ ಸಲುವಾಗಿ ಸರ್ಕಾರದವರು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಉತ್ತರ ಹೇಳಿದರೆ ಹೇಗೆ ? ಗ್ರಾಮಾಂತರ ಪ್ರದೇಶದ ಜನರಿಗೆ ನಿರತಕ್ಕಂಥ ರಿಕ್ವೈರ್‌ಮೆಂಟನ್ನು ಸಪ್ಲೈ ಮಾಡದೆ ಇದ್ದರೆ ಹೇಗೆ ? ಈ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು ?

ಶ್ರೀ ಬಸವರಾಜಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಹಸಿರು ಕಾರ್ಡಿಗೆ ೧೦ ಕೆ.ಜಿ ಅಕ್ಕಿಯನ್ನು ಕೊಡುತ್ತಿರುವುದು ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಚಾರ. ಸಬ್‌ಸಿಡಿ ರೇಟ್‌ನಲ್ಲಿ ಕೊಡುತ್ತಿರುವುದರಿಂದ ಅವರಿಗೆ ಅನ್ಯಾಯವಾಗುವುದಿಲ್ಲವೆಂದು ನಾವು ಉತ್ತರದಲ್ಲಿ ಹೇಳಿದ್ದೇವೆ. ಅವರು ಹೇಳಿದಂತೆ ಪ್ರತಿಯೊಂದು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಒಂದೇ ಸಮನಾಗಿ ಮಾಡಬೇಕೆಂದು ಮಾನ್ಯ ಮಂಖ್ಯಮಂತ್ರಿಗಳು ಹೋದ ಕಡೆಗಳಲ್ಲಿ ಜನರು ಪ್ರಾರ್ಥನೆ ಮಾಡಿಕೊಂಡಿದ್ದಾರೆ, ನನಗೂ ಸಹ ಹೇಳಿದ್ದಾರೆ. ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ.. ಗ್ರಾಮಾಂತರ ಪ್ರದೇಶಗಳಿಗೆ ಅನ್ಯಾಯವಾಗಿಲ್ಲವೆಂದು ಏತಕ್ಕೆ ಹೇಳಿದೆ ಎಂದರೆ ರೈತರು ಅವರಿಗೆ ಬೇಕಾದ್ದನ್ನು ಬೆಳೆದು ಕೊಳ್ಳುತ್ತಾರೆ. ಆದರೆ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಜನ ಈ ಪಡಿತರ ಪದ್ಧತಿಯ ಮೇಲೆಯೇ ಅವಲಂಬಿಸಿರುತ್ತಾರೆ, ಇದರಿಂದ ಪಟ್ಟಣಪ್ರದೇಶಗಳಲ್ಲಿ ಸ್ವಲ್ಪ ಜಾಸ್ತಿ ಕೊಡುತ್ತಿದ್ದೇವೆ, ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಆಹಾರ ಮಂತ್ರಿಗಳಿಗೆ ಪತ್ರ ಬರೆದು ಮನವಿ ಮಾಡಿಕೊಂಡು ನಮಗೆ ಆಹಾರ ಪದಾರ್ಥಗಳನ್ನು ಹೆಚ್ಚು ಕೊಡಿ ಎಂದು ಕೇಳಿಕೊಂಡಿದ್ದಾರೆ, ನಾನೂ ಸಹ ಕೇಳಿಕೊಂಡಿದ್ದೇನೆ. ಬಹುಶಃ ಕೇಂದ್ರ ಸರ್ಕಾರ ಹೆಚ್ಚು ಆಹಾರ ಧಾನ್ಯಗಳು ನಮಗೆ ಕೊಟ್ಟರೆ ಆಗ ತಾವು ಹೇಳುವುದು ಸಾಧ್ಯ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಜನರು ಕೃಷಿ ಕಾರ್ಮಿಕರು ಇದ್ದಾರೆ. ಆ ಜನರಿಗೆ ತಾವು ಹಸಿರು ಕಾರ್ಡ್ ಕೊಟ್ಟಿದ್ದೀರಿ. ಅವರಿಗೆ ಆಹಾರಧಾನ್ಯಗಳು ಅಗತ್ಯ ವಿರುವುದರಿಂದ ಅವರು ಅದನ್ನು ಬೆಳೆದುಕೊಳ್ಳುವುದಕ್ಕೆ ಜಮೀನು ಇರುವುದಿಲ್ಲ. ಜಮೀನು ಇದ್ದವರಿಂ

ಆಹಾರ ಪದಾರ್ಥಗಳನ್ನು ಬೆಳೆದುಕೊಳ್ಳುತ್ತಾರೆ. ಜಮೀನು ಇರುವ ರೈತರು ಬೆಳೆಯುತ್ತಾರೆ. ಜಮೀನು ಇಲ್ಲದವರು ಬೆಳೆಯುವುದಿಲ್ಲ. ಹಸಿರು ಕಾರ್ಡ್ ಕೊಟ್ಟಿರುವುದು ಕೂಲಿ ಮಾಡತಕ್ಕ ಕೃಷಿ ಕಾರ್ಮಿಕರಿಗೆ. ಅವರುಗಳಿಗೆ ನೀವು ಬೇಕಾದಷ್ಟು ಅಕ್ಕಿಯನ್ನು ಕೊಡಬೇಕು. ನೀವು ಕಡಿಮೆ ಅಕ್ಕಿ ಕೊಟ್ಟರೆ ಅವರುಗಳು ದುಡ್ಡು ತೆಗೆದುಕೊಂಡು ಅಂಗಡಿಗೆ ಹೋಗಿ ಅಕ್ಕಿ ತರುವುದು ತಪ್ಪುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಕಾರ್ಡ್ ಹೊಂದಿರುವ ಕೃಷಿ ಕಾರ್ಮಿಕರುಗಳಿಗೆ ಪಟ್ಟಣದಲ್ಲಿ ಹೇಗೆ ಆಹಾರವನ್ನು ವಿತರಣೆ ಮಾಡಲಾಗುತ್ತಿದೆಯೋ ಅದೇ ರೀತಿ ವಿತರಣೆ ಮಾಡಬೇಕು. ಆಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಬೇರೆ ಕಾರ್ಡ್ ಹೊಂದಿರುವವರಿಗೆ ಒಂದು ಕೆ.ಜಿ. ಅಕ್ಕಿ ಕೂಡಾ ಸಿಗುವುದಿಲ್ಲ, ಸಕ್ಕರೆ ಒಂದು ಕೆ.ಜಿ. ಮಾತ್ರ ಕೊಡುತ್ತಾರೆ. ಅದೂ ಸಿಕ್ಕಿದರೆ ಸಿಕ್ಕಿತು ಇಲ್ಲದಿದ್ದರೆ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ವಿತರಣೆ ಸರಿಯಾಗಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕೂಲಿ ಕಾರ್ಮಿಕರಿಗೆ ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆಂದು ಹೇಳಬೇಕು.....

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಾ ಕಡೆ ಅಕ್ಕಿಯನ್ನು ಸಮರ್ಪಕವಾಗಿ ವಿತರಣೆ ಮಾಡಬೇಕಾದರೆ,ಈಗ ಏನು ಕೇಂದ್ರ ಸರ್ಕಾರದವರು ೬೦ ಸಾವಿರ ಟನ್ ಅಕ್ಕಿಯನ್ನು ಕೊಡುತ್ತಿದ್ದಾರೋ ಅದರ ಪ್ರಮಾಣವನ್ನು ೧ ಲಕ್ಷದ ೨೦ ಸಾವಿರ ಟನ್‌ಗೆ ಏರಿಸಿದರೆ ಮಾತ್ರ ಆಗಂತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಿಗೆ ೧೦ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೇವೆ, ಇದರ ಜೊತೆಗೆ ಜೋಳ ಮತ್ತು ರಾಗಿಯನ್ನೂ ಸಹ ಕೊಡಲಾಗುತ್ತದೆ. ಆಮೇಲೆ ಮಾನ್ಯ ಸದಸ್ಯರುಗಳು ಪಟ್ಟಣಗಳಿಗೆ ಒಳ್ಳೆಯ ಅಕ್ಕಿಯನ್ನು ಸರಬರಾಜು ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಕಳಪೆ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ನಾವು ಎಲ್ಲಾ ಕಡೆಯಲ್ಲೂ ಒಂದೇ ರೀತಿಯಾದ ಅಕ್ಕಿಯನ್ನು ವಿತರಣೆ ಮಾಡುತ್ತಿದ್ದೇವೆ. ಒಂದು ಪಕ್ಷ ಕಳಪೆ ಅಕ್ಕಿ ಬಂದರೆ ಅದನ್ನು ವಾಪಸ್ ಮಾಡಿ ಬೇರೆ ಅಕ್ಕಿಯನ್ನು ಪಡೆದುಕೊಳ್ಳುವಂತೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಅದರಂತೆ, ಕಳಪೆ ಅಕ್ಕಿ ಏನಾದರೂ ಬಂದರೆ ಅದನ್ನು ವಾಪಸ್ ಮಾಡಿ ಒಳ್ಳೆಯ ಅಕ್ಕಿಯನ್ನು ಪಡೆಯಬಹುದು.

ಶ್ರೀ ಬಿ. ಲಕ್ಕಪ್ಪ.—ಪಟ್ಟಣಗಳಲ್ಲಿ ತಲೆ ಕೂದಲು ಇರುವ ಹಾಗೆ ಸಣ್ಣ ಅಕ್ಕಿಯನ್ನು ಕೊಡುತ್ತಿದ್ದಾರೆ. ನಾನು ಅದನ್ನು ನೋಡಿದ್ದೇನೆ. ಮಾನ್ಯ ಮಂತ್ರಿಯವರು ಸದನಕ್ಕೆ ತಪ್ಪು ಹೇಳಬಾರದು. ಗ್ರಾಮಾಂತರ ಪ್ರದೇಶಗಳಲ್ಲಿ ಕೊಡುವ ಅಕ್ಕಿಯು, ಕೂಲಿಗಾಗಿ ಕಾಳು ಕೊಡುವಾಗ ಯಾವ ರೀತಿ ಇರುತ್ತದೆಯೋ ಅದೇ ಮಟ್ಟಿದ ಅಕ್ಕಿಯನ್ನು ಕೊಡಲಾಗುವುದನ್ನು ನಾನು ನೋಡಿದ್ದೇನೆ. ಕ್ವಾಲಿಟಿ ವಿಚಾರದಲ್ಲಿ ಪಟ್ಟಣ ಪ್ರದೇಶಗಳಲ್ಲಿ ವಿತರಣೆ ಮಾಡುವ ಅಕ್ಕಿಗೂ ಗ್ರಾಮಾಂತರ ಪ್ರದೇಶಗಳಿಗೆ ವಿತರಣೆ ಮಾಡುವ ಅಕ್ಕಿಗೂ ವ್ಯತ್ಯಾಸ ಇದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಿಗೂ ಪಟ್ಟಣ ಪ್ರದೇಶಗಳಲ್ಲಿ ಕೊಡುವ ಮಟ್ಟದ ಅಕ್ಕಿಯನ್ನೇ ಕೊಡಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ಕಾರ್ಯರೂಪಕ್ಕೆ ತರುತ್ತೇನೆ.

ಮೈಸೂರಿನಲ್ಲಿ ಕರೆನ್ಸಿ ಮುದ್ರಣಾಲಯ

೨೩೬೨. ಶ್ರೀ ಪಿ. ಎಂ. ಚಿಕ್ಕಬೋರಯ್ಯ(ಚಾಮರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಬಳಿ ಭಾರತ ಸರ್ಕಾರ ಕರೆನ್ಸಿ ಮುದ್ರಣಾಲಯ ಸ್ಥಾಪಿಸಲು ಕೊಟ್ಟಿರುವ ಜಮೀನು ಎಷ್ಟು ಮತ್ತು ಯಾವ ಸ್ಥಳದಲ್ಲಿ ನೀಡಲಾಗಿದೆ.

ಆ) ಆ ಮುದ್ರಣಾಲಯದ ಉದ್ಯೋಗಿಗಳ ಸಂಖ್ಯೆ ಎಷ್ಟು ?

ಇ) ಅಲ್ಲಿಗೆ ನೇಮಕಗಳನ್ನು ಮಾಡುವಾಗ ಸ್ಥಳೀಯರಿಗೆ ಹಾಗೂ ಬೇಸಾಯದ ಜಮೀನು ಕಳೆದುಕೊಂಡವರಿಗೆ ಆದ್ಯತೆ ನೀಡಬೇಕೆಂದು ಸರ್ಕಾರದವರು ಕ್ರಮ ಕೈಗೊಳ್ಳುವರೇ ?